ಶ್ರೀ ಬಿ. ವಿ. ನಾರಾಯಣರೆಡ್ಡಿ.—ಸಂಸ್ಥಾನದಲ್ಲಿ ಬೇರೆಬೇರೆ ಬ್ಯಾಕ್‌ವರ್ಡ್ ಕ್ಲಾಸ್‌ನವರು ಎಷ್ಟುಕಡಾ ವಾರು ಎಷ್ಟಿದ್ದಾರೆ?

Sri Kadidal MANJAPPA.—I do not remember just now.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಸಂಸ್ಥಾನದಲ್ಲಿ ಶೇಕಡ 16% ಕ್ಕಿಂತ ಜಾಸ್ತಿ ಇದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಇದ್ದಾರೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಪಬ್ಲಿಕ್ ಸರ್ವಿಸ್ ಕಮಿಷನ್ ಒಂದು 'ಬ್ಯಾರಾಮೀಟರ್' ರೀತಿಯಲ್ಲಿದೆ. ಬ್ಯಾಕ್‌ವರ್ಡ್ ಕಮ್ಯೂನಿಟಿಯವರು ಫೈನಲ್ ಕ್ಲಾಸಿ ನವರ ಮಟ್ಟಕ್ಕೆ ಬರುವ ಹಾಗೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಬ್ಯಾಕ್‌ವರ್ಡ್ ಕಮ್ಯೂನಿಟಿಗಳಲ್ಲಿ ಯಾವ ಯಾವ ಪಂಗಡದವರಿಗೆ ಪ್ರಾತಿನಿಧ್ಯವಿಲ್ಲವೊ ಅಥವಾ ಸರಿಯಾದ ಪ್ರಾತಿನಿಧ್ಯ ವಿಲ್ಲವೊ ಆ ಪಂಗಡದವರಿಗೆ ಸರಿಯಾದ ಪ್ರಾತಿನಿಧ್ಯ ಕೊಡಬೇಕೆಂದು ಸೂಚನೆ ಕೊಡಲಾಗಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗಿದ್ದರೆ ಬೇರೆಯವರಿಗೆ ಇವರು ಅವರ ಮಟ್ಟಕ್ಕೆ ಬರುವವರೆಗೆ ಕೆಲಸಗಳನ್ನು ಕೊಡುವುದನ್ನು ನಿಲ್ಲಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲವನ್ನೂ ಜನ ಸಂಖ್ಯೆಯ ಮೇಲೆಯೇ ಮಾಡುವುದಕ್ಕಾಗುವುದಿಲ್ಲ. ಹಿಂದುಳಿದ ಪಂಗಡದವರಿಗೆ ಪ್ರಾತಿನಿಧ್ಯವಿಲ್ಲದವರಿಗೆ ಅಥವಾ ಅಲ್ಪಸ್ವಲ್ಪ ಮಾತ್ರ ಪ್ರಾತಿನಿಧ್ಯವಿರುವವರಿಗೆ ಸೂಕ್ತವಾದಷ್ಟು ಕೊಡಬೇಕೆಂದಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಕೋಮುವಾರು ತೆಗೆದುಕೊಂಡಿದ್ದರೆ, ಒಂದೇ ಕೋಮಿನವರು ಜಾಸ್ತಿ ಇದ್ದರೆ ಬೇರೆಯವರೂ ಅವರ ಮಟ್ಟಕ್ಕೆ ಬರುವಂತೆ ಮಾಡಲು ಪ್ರಯತ್ನ ಮಾಡುತ್ತೀರಾ ಎಂಬುದು ನನ್ನ ಪ್ರಶ್ನೆ.

ಶ್ರೀ ಕಡಿದಾಳ್ ಮಂಜಪ್ಪ.—ರಾಜ್ಯಾಂಗದಲ್ಲೇ ಈ ಸಂಬಂಧವಾದ ನಿಯಮವಿದೆ. Unrepresented and under representedಗೆ ತಕ್ಕಷ್ಟು ಪ್ರಾತಿನಿಧ್ಯ ಕೊಡಬೇಕೆಂಬುದನ್ನು ಹೇಳಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಯಾವ ಕೋಮಿನವರು ಜಾಸ್ತಿ ಇದ್ದಾರೋ ಅವರಿಗೇ ಇನ್ನೂ ಕೊಡುತ್ತಿದ್ದಾರೆಂಬುದು ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಇಮಾಮ್ ಸಾಹೇಬರ ಪ್ರಶ್ನೆಗೆ ಉತ್ತರ ಹೇಳುವಾಗ ತಿಳಿಸಿದ್ದೇನೆ. ಕೆಲಸ ಕೊಡುವಾಗ ಇದೆಲ್ಲವನ್ನೂ ಇದರ ಜೊತೆಗೆ meritನ್ನೂ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಗಮನಕ್ಕೆ ತಗೆದುಕೊಳ್ಳುತ್ತಾರೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ. Merit ಎನ್ನುವುದು environment ಮೇಲೆ ಬರುತ್ತದಲ್ಲವೆ?

(ಉತ್ತರವಿಲ್ಲ).

ಶ್ರೀ ಎ. ಭೀಮಪ್ಪನಾಯಕ್.—ಯಾವ ಪಂಗಡಕ್ಕೆ ಹೆಚ್ಚು ಪ್ರಾತಿನಿಧ್ಯ ಬೇಕೋ ಅದಕ್ಕೆ ಬಹು ಹೆಚ್ಚು ಪ್ರಾತಿನಿಧ್ಯ ಕೊಡುವುದು, ಪ್ರಾತಿನಿಧ್ಯವಿಲ್ಲದೇ ಇರುವ ಪಂಗಡವನ್ನು ಹಾಗೆಯೇ ಬಿಡುವುದು, ಹೀಗೆ ನಡೆಯುತ್ತಿಲ್ಲವೆ ಈಗಿರುವ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ?

Mr. SPEAKER.—That is an imputation.

Sri A. BHEEMAPPA NAIK.—Sir, I am going to show that certain communities which have never been selected or represented are being left unrepresented. Communities which are over-represented are being more and more represented and increased from year to year. Inadequately represented communities are also being given some representation. But unrepresented communities are not at all being represented. That is not an imputation. That is a fact.

Sri Kadidal MANJAPPA.—That is a speech, Sir.

Sri A. BHEEMAPPA NAIK.—Will the Hon'ble Revenue Minister be pleased to look into these figures and find out whether unrepresented communities are not given up completely during the recent selection of medical probationers?

Sri Kadidal MANJAPPA.—I am told that they have tried their best to secure representation to unrepresented and inadequately represented communities. The communities of the various candidates selected have been given here.

Mr. SPEAKER.—The very question had been asked by the Hon'ble Member previously.

Sri A. BHEEMAPPA NAIK.—At least to set it right in future, will Government before issuing final orders scrutinise whether they have done justice, and, especially in the case of probationers, will the Government scrutinise and then issue final orders?

Sri Kadidal MANJAPPA.—If the Government comes to know that there are irregularities, they are bound to set right these irregularities.

---

9 A.M.

Sites for Bhovi (Voddars) families at Tiptur.

Q. 216.—Sri T. G. THIMME GOWDA (Tiptur).—

Will the Government be pleased to state:—

(*a*) whether they are aware that a good number of Bhovi (Voddars) families have been rendered homeless by the acquisition of their houses and sheds for the purpose of the regulated market committee at Tiptur;

(*b*) whether it is a fact that several Harijan families of Tiptur who were rendered homeless by a simultaneous acquisition have been granted sites free of cost ;

(*c*) whether they have taken any measures to help the " Bhovi " community also and remove the feeling of alleged discrimination felt by the " Bhovi " families ?

A.—Dr. R. NAGAN GOWDA (Minister for Agriculture).—

(*a*) No.

(*b*) Yes. The Municipality has given them sites free of cost.

(*c*) The matter is under consideration.

ಶ್ರೀ ಟಿ. ಜಿ. ತಿಮ್ಮೇಗೌಡ.—ಈಗ acquire ಆಗಿ ರತಕ್ಕ ಜಮೀನಿನಲ್ಲಿ ಎಷ್ಟು ಬೋಯಿ ಜನಾಂಗದವರು ವಾಸಮಾಡುತ್ತಿದ್ದಾರೆ ?

ಡಾ॥ ಆರ್. ನಾಗನಗೌಡ.— ಈಗ 10-15 families ಇಲ್ಲಿ ವಾಸಮಾಡುತ್ತಿದ್ದಾರೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ಜಮೀನು acquire ಆಗಿರುವುದರಿಂದ ಬೋಯಿ ಜನರಿಗೆ ನಿವೇಶನಗಳನ್ನು ಕಟ್ಟಿಸಿ ಕೊಡಬೇಕೆಂದು ತಿಪಟೂರು ಮುನಿಸಿಪಾಲಿಟಿಗೆ ಕೇಳಿಕೊಂಡಿರುವುದು ನಿಜವೇ ?

ಡಾ॥ ಆರ್. ನಾಗನಗೌಡ.—ಅವರು ಆ ಮುನಿಸಿಪಾಲಿಟಿಯವರನ್ನು ಕೇಳಿಕೊಂಡಿದ್ದಾರೆ.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ರೀತಿ ಕೇಳಿಕೊಂಡ ಮೇರೆ ಜಮೀನು acquire ಆಗದಿದ್ದರೆ (*c*) ಪ್ರಶ್ನೆಯಲ್ಲಿ ಹೇಳಿದಂತೆ ಯಾವ ವಿಚಾರವನ್ನು ಪರ್ಯಾಲೋಚನೆಯಲ್ಲಿ ಇಟ್ಟಿದ್ದೀರಿ ?

ಡಾ॥ ಆರ್. ನಾಗನಗೌಡ.—ಸ್ಮೈಟುಗಳನ್ನು acquire ಮಾಡಿದರೂ ಅವರು ಇನ್ನೂ ಮನೆಗಳನ್ನು ಬಿಟ್ಟು ಹೋಗಿಲ್ಲ. ಇಬ್ಬರು ಮಾತ್ರ ಬೇರೆ ಮನೆಗಳನ್ನು ಕಟ್ಟಿಕೊಂಡು ಹೋಗಿದ್ದಾರೆ. ಆದಕಾರಣ 'no' ಎಂದು ಉತ್ತರ ಕೊಟ್ಟಿದೆ. ಅವರಿಗೆ ಬೇಕಾದ ಭೂಮಿಯನ್ನು acquire ಮಾಡುವುದಕ್ಕೆ ಸರಿಯಾದ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿದ್ದೇವೆ.

ಶ್ರೀ ಟಿ ಜಿ. ತಿಮ್ಮೇಗೌಡ.—ಈ ವಿಚಾರದಲ್ಲಿ ಕೂಡಲೆ ಪ್ರಯತ್ನ ಮಾಡಲಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಈಗಾಗಲೇ acquire ಮಾಡಬೇಕು ಎಂದು ಡೆಪ್ಯುಟಿ ಕಮಿಷನರ್‌ಗೆ ತಿಳಿಸಿದ್ದೇವೆ. ಈಗ Amildar and local officers acquisition proceedingsನ್ನು, ಜರುಗಿಸುತ್ತಿದ್ದಾರೆ.

Cattle and Sheep Farms (steps to start in Harapanahalli or Hadagalli).

Q.—363. Sri Ijari SIRASAPPA (Harapanahalli).—

Will the Government be pleased to state :—

(*a*) whether any representation has been received to start a cattle and sheep farm in Harapanahalli or Hadagalli Taluk in Bellary District ; and

(*b*) if so, the action taken thereon ?

A.—Dr. R. NAGAN GOWDA (Minister for Agriculture).—

(*a*) No.

(*b*) Does not arise.

Sri Ijari SIRASAPPA.—I would like to bring to the notice of the Hon'ble Minister that there is a representation and I have got no supplementaries.

Rural Electrification.

Q.—464. Sri B. HUTCHE GOWDA (Turuvekere).—

Will the Government be pleased to state :—

whether they have chalked out any programme to provide electricity on an extensive scale to the rural parts of the State ; if so, the details of the programme ?

A.—Dr. R. NAGAN GOWDA (Minister for Agriculture).—

Yes. A sum of Rs. 202·5 lakhs has been provided in the First Five-Year Plan for Rural Electrification and 260 villages have been electrified from 1951-52 to end of December 1954. A scheme for supplying electricity to 168 more villages has been prepared at a cost of about Rs. 150 lakhs for execution during 1955-56.

ಶ್ರೀ ಬಿ. ಹುಚ್ಚೇಗೌಡ.—ವಿದ್ಯುಚ್ಛಕ್ತಿಯ ಉತ್ಪತ್ತಿಯನ್ನು ಇಂಡಿಯಾ ದೇಶದಲ್ಲೆಲ್ಲಾ ಪ್ರಥಮತಃ ಸ್ಥಾಪನೆ ಮಾಡಿರುವುದು ಮೈಸೂರಿನಲ್ಲಿ ಅಲ್ಲವೇ ?

Mr. SPEAKER.—It has been unfortunately disallowed. It is not an information that you want to elicit. It is a known fact.

ಶ್ರೀ ಬಿ. ಹುಚ್ಚೇಗೌಡ.—ನೆರೆಯ ದೇಶವಾದ ಮದ್ರಾಸಿನಲ್ಲಿ 100ಕ್ಕೆ 25 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Dr. R. NAGAN GOWDA.—I think the percentage is higher in our State.

ಶ್ರೀ ಬಿ. ಹುಚ್ಚೇಗೌಡ.—ಮೈಸೂರಿನಲ್ಲಿ ಎಷ್ಟು percentage ?

ಡಾ॥ ಆರ್. ನಾಗನಗೌಡ.—ಈಗಾಗಲೇ 750ರ ವರೆಗೂ ಹೋಗಿದೆ. ಇದರಲ್ಲಿ ಮೈಸೂರಿಗೂ ಮದ್ರಾ